ಶೈಲಜಾ ಜಿ.ಎಂ. ಮೈಸೂರು

# ಕೆಂಚಣ್ಣನ ತಾರಸಿ ಮನೆ

ಒಂದು ಊರಿನಲ್ಲಿ ಕೆಂಚಣ್ಣ ಎಂಬ ವ್ಯಕ್ತಿ ಇದ್ದ. ಅವನ ಏಕೈಕ ಆಸ್ತಿ ಎಂದರೆ ಒಂದು ಸಣ್ಣ ಜಾಗ. ಒಮ್ಮೆ ಅವನಿಗೆ ಹೇಗಾದರೂ ಮಾಡಿ ಆ ಜಾಗದಲ್ಲಿ ಒಂದು ಸಣ್ಣ ಮನೆ ಕಟ್ಟಿಕೊಳ್ಳಬೇಕು ಎನ್ನುವ ಆಸೆ ಮೊಳಕೆಯೊಡೆಯಿತು. ಆಸೆಯಂತೆ ಮನೆಯನ್ನೇನೊ ಕಟ್ಟಿಕೊಂಡ. ಅವನ ಜಾಗದಲ್ಲಿ ಚಿಕ್ಕದಾಗಿ ಒಂದು ಅಡಿಗೆ ಕೋಣೆ, ಸ್ನಾನದ ಕೋಣೆಯಲ್ಲೇ ಕಕ್ಕಸ್ಸಿನ ಕೋಣೆ, ಮಲಗಲು ಸಣ್ಣ ಜಾಗ... ಇದಿಷ್ಟೇ ಕಟ್ಟಲು ಸಾಧ್ಯವಾಯಿತು. ಈ ಮನೆ ಬಹಳ ಸಣ್ಣದಾಯಿತು ಎಂದುಕೊಂಡ.

ಅವನಿಗೆ ಒಂದು ಅಡಿಗೆ ಕೋಣೆ, ಒಂದು ಸ್ನಾನದ ಕೋಣೆ, ಒಂದು ಕಕ್ಕಸಿನ ಕೋಣೆ, ಒಂದು ಊಟದ ಕೋಣೆ, ಒಂದು ಮಲಗುವ ಕೋಣೆ, ಒಂದು ಓದುವ ಕೋಣೆ, ಬರುವ ನೆಂಟರಿಗೆ ಒಂದು ಕೋಣೆ... ಇಷ್ಟು ಬೇಕಾಗಿತ್ತು. ಇಷ್ಟೇ ಜಾಗದಲ್ಲಿ ಅಷ್ಟೆಲ್ಲವನ್ನೂ ಕಟ್ಟುವುದು ಹೇಗೆ ಎನ್ನುವ ಗೊಂದಲ ಉಂಟಾಯಿತು. ಆಗ ಅವನಿಗೆ ಒಂದು ಆಲೋಚನೆ ಹೊಳೆಯಿತು. ಈ ಮನೆ ಮೇಲೆ ಮಹಡಿಯೊಂದನ್ನು ಕಟ್ಟಿದರೆ ತನಗೆ ಬೇಕಾದಷ್ಟು ಕೋಣೆಗಳನ್ನು ಕಟ್ಟಿಕೊಳ್ಳಬಹುದು ಎಂದುಕೊಂಡು, ಅದನ್ನು ಕಾರ್ಯರೂಪಕ್ಕೆ ತಂದ.

